IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಸಂಶೋಧನ ಪ್ರಸ್ತಾವನೆ

**ಶ್ರೀಮತಿ ಶ್ವೇತಾ.ಎಂ.**
**ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,**
**ವಿದ್ಯಾವರ್ಧಕ ಸಂಘ, ಪ್ರಥಮ ದರ್ಜೆ ಕಾಲೇಜು**
**ಬಸವೇಶ್ವರನಗರ ಬೆಂಗಳೂರು.**

**೧. ಸಂಶೋಧನ ವಿಷಯ ಶೀರ್ಷಿಕೆ:**

**"ಜನಪದ ಸಾಹಿತ್ಯದಲ್ಲಿ ಸ್ತ್ರೀ ಸಂವೇದನಾ ನೆಲೆಗಳು"**

**೨. ಅಧ್ಯಯನದ ಉಚಿತತೆ ಮತ್ತು ಅದರ ಜ್ಞಾನಮಟ್ಟ:**

ಜನಪದ ಸಾಹಿತ್ಯವು ಆಕಾಶದಷ್ಟು ವಿಶಾಲ, ಅಬ್ಧಿಯಷ್ಟು ಆಳವಾದದ್ದು, ಜನಪದ ಅಥವಾ ಜಾನಪದ ಎಂಬುದು ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುವ ಜನರು, ಅವರಲ್ಲಿ ಹಾಡುಕಟ್ಟಿ ಹಾಡುವುದನ್ನು ಜನಪದ ಸಾಹಿತ್ಯ ಎನ್ನುತ್ತಾರೆ. ಜನರ ಬಾಯಿಂದ ಬಾಯಿಗೆ ಹರಿದು ಬಂದಿರುವ ಸಾಹಿತ್ಯವನ್ನು ವಿವಿಧ ಪ್ರದೇಶದ ಪ್ರಾದೇಶಿಕ ಸೊಗಡನ್ನು ತಿಳಿಸಿಕೊಡುವುದಾಗಿದೆ.

ಭಾರತ ದೇಶದಲ್ಲೇ ನಮ್ಮ ಕರುನಾಡಿನ ಜನಪದ ಸಂಸ್ಕೃತಿ ಅತ್ಯಂತ ಶ್ರೀಮಂತವಾಗಿವೆ. ಅದರ ಕಲೆ, ನೃತ್ಯ, ಸಂಗೀತ ಸಾಹಿತ್ಯ, ನಾಟಕಗಳು ಹಾಗೂ ನಮ್ಮ ಸಂಸ್ಕೃತಿಯ ಭಾಗವಾದ ಜಾನಪದ ಗೀತೆಗಳು ವಿವಿಧ ದೇಶದ ಪ್ರಾದೇಶಿಕ ಸೊಗಡನ್ನು ತಿಳಿಸಿಕೊಡುವುದಾಗಿದೆ.

ಇದರಲ್ಲಿ ಮಹಿಳೆ ಅಥವಾ ಸ್ತ್ರೀ ಸಂವೇದನಾ ನೆಲೆಗಳು ಹೇಗೆ ಬಿಂಬಿತವಾಗಿದೆ ಎಂಬುದನ್ನು ನಾವು ಜನಪದ ಸಾಹಿತ್ಯದಲ್ಲಿರುವ ಆಧಾರಗಳ ಮೂಲಕ ತಿಳಿಯಬಹುದಾಗಿದೆ.

ಜನಪದ ಸಂಸ್ಕೃತಿಯಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಬೌದ್ಧಿಕವಾಗಿ, ಸಾಂಸ್ಕೃತಿಕವಾಗಿ ಹೇಗೆ ಗರತಿಯು ತನ್ನ ಸ್ಥಾನಮಾನಗಳೊಂದಿಗೆ ವಿರಾಜಿಸಿದ್ದಾಳೆ ಎಂಬುದನ್ನು ಆ ಮೂಲಕ ಅವಳ ಸಂವೇದನಾತ್ಮಕತೆಯ ನೆಲೆಗಳೊಂದಿಗೆ ಈ ಅಧ್ಯಯನದಲ್ಲಿ ಸಂಶೋಧನೆಗೆ ಒಳಪಡಿಸುವುದಾಗಿದೆ.

**೩. ಸಂಶೋಧನ ಸಮಸ್ಯೆಯ ವ್ಯಾಖ್ಯಾನ:**

ಮಹಾ ಪ್ರಬಂಧದಲ್ಲಿ ಜನಪದ ಸಾಹಿತ್ಯದ ಅರ್ಥ, ವ್ಯಾಖ್ಯಾನ, ಸ್ವರೂಪ, ಲಕ್ಷಣ ಮಹತ್ವದ ಕುರಿತು ಸ್ಥೂಲ ಪರಿಚಯ ಮಾಡಿಕೊಡಲಾಗುತ್ತದೆ. ಜನಪದದಲ್ಲಿ ಮಹಿಳಾ ಸ್ಥಾನಮಾನದೊಂದಿಗೆ ಅವಳ ಸಂವೇದನಾತ್ಮಕತೆಯನ್ನು ವಿವಿಧ ನೆಲೆಗಟ್ಟಿನಲ್ಲಿ ವಿಮರ್ಶಾತ್ಮಕ ವಿಶ್ಲೇಷಣೆ ಮಾಡಲಾಗುವುದು. ಏಕೆಂದರೆ ಸಾಗರದಷ್ಟು ಆಳವಾಗಿರುವ ಈ ಸಾಹಿತ್ಯದಲ್ಲಿ ಮಹಿಳೆಯ/ಸ್ತ್ರೀಯ ಸಂವೇದನಾ ಶೀಲತೆಯ ನೆಲೆಗಟ್ಟಿನ ಅಧ್ಯಯನ ತುಂಬಾ ಅವಶ್ಯಕವೆನಿಸುತ್ತದೆ. ಏಕೆಂದರೆ ಪ್ರತಿ ಹಂತದಲ್ಲೂ ವಿಭಿನ್ನವಾಗಿ ಕಾಣಿಸಿಕೊಳ್ಳುವ ಸ್ತ್ರೀಯ ಏಕರೂಪತೆಯಲ್ಲಿನ ವೈಶಾಲ್ಯತೆ ಅಡಿಗಿದೆ. ಯಾವ ಸಂಶೋಧಕನಿಗೆ ಅವುಗಳ ಅರ್ಥ ವಿಶ್ಲೇಷಣೆ, ವಿಮರ್ಶಮಾತ್ಮಕ ಒಳನೋಟ ಅವುಗಳ ನೈತಿಕ ಮೌಲ್ಯಗಳನ್ನು ತಿಳಿಯುವುದು ಮುಖ್ಯವೆನಿಸುತ್ತದೆ.

ಈ ದಿಶೆಯಲ್ಲಿ ಜನಪದ ಸಾಹಿತ್ಯದ ಪ್ರದೇಶಗಳಲ್ಲಿ ತಂತ್ರ, ನೀತಿ, ಶೈಲಿಗಳಲ್ಲಿ ಹೇಗೆ ಮಹಿಳೆಯನ್ನು ಬಿಂಬಿಸಿದ್ದಾರೆ ಎನ್ನುವುದರ ಜೊತೆಗೆ ಸಾಮಾಜಿಕವಾಗಿ, ಮನೋವೈಜ್ಞಾನಿಕವಾಗಿ ತಾತ್ವಿಕವಾಗಿ, ಬೌದ್ಧಿಕವಾಗಿ, ಸಾಂಸ್ಕೃತಿಕವಾಗಿ ಹೇಗೆ ಹಲವು ಮಜಲುಗಳಲ್ಲಿ ಸಂಶೋಧನಾತ್ಮಕ ಅಧ್ಯಯನ ಕೈಗೊಳ್ಳಬಹುದಾಗಿದೆ.

**ಅಧ್ಯಯನದ ಇತಿ–ಮಿತಿಗಳು:**

- ಮಹಾಪ್ರಬಂಧವು ತನ್ನ ಕನ್ನಡ ಸಾಹಿತ್ಯದ ರೂಪವಾದ ಜನಪದ ಸಾಹಿತ್ಯವಾಗಿದ್ದು, ಅದರಲ್ಲಿ ಸ್ತ್ರೀ ಸಂವೇದನೆ ಅವಳ ಪಾತ್ರಚಿತ್ರಣ ಹಾಗೂ ಸ್ಥಾನಮಾನಗಳ ನೆಲೆಗಳಿಗೆ ಮಾತ್ರ ಸಂಬಂಧಿಸಿದ್ದಾಗಿದೆ ಹಾಗೂ ಪ್ರಬಂಧದ ಬರವಣಿಗೆಯು ಹೊಸಗನ್ನಡ ಗ್ರಾಂಥಿಕ ಭಾಷೆಯಲ್ಲಿ ರಚಿಸಲಾಗಿದೆ.
- ಆಯ್ದುಕೊಂಡ ವಿಷಯಕ್ಕೆ ಕುರಿತ ಶೋಧನೆ, ಸಂಶೋಧನೆ ಅಭಿಪ್ರಾಯ, ವಿಮರ್ಶಾ ಕೃತಿಗಳನ್ನು ಪರಿಶೀಲಿಸಲಾಗುತ್ತದೆ.
- ಸಾಮಾಜಿಕ, ಸಾಂಸ್ಕೃತಿಕ, ಪ್ರಾದೇಶಿಕ, ಬೌದ್ಧಿಕ, ಆರ್ಥಿಕ ನೆಲೆಗಟ್ಟಿನಲ್ಲಿ ಸ್ತ್ರೀ ಸಂವೇದನಾ ನೆಲೆಗಳು ಹಾಗೂ ಸ್ಥಾನಮಾನ ಕೇಂದ್ರಿತವಾಗಿದೆ.
- ವಿಮರ್ಶಾತ್ಮಕ, ವಿಶ್ಲೇಷಣಾತ್ಮಕ, ವ್ಯಾಖ್ಯಾತ್ಮಕವಾದ ಮತ್ತು ಅಧ್ಯಯನ ವಿಧಗಳ ಚೌಕಟ್ಟಿಗೆ ಒಳಪಟ್ಟಿದೆ.
- ಜನಪದ ಸಾಹಿತ್ಯದಲ್ಲಿ ಸ್ತ್ರೀ ಸಂವೇದನಾ ನೆಲೆಗಳ ಬರಹಗಳನ್ನು ಕುರಿತು ಇದುವರೆಗೆ ಪ್ರಕಟಿತಗೊಂಡ ವಿಮರ್ಶಾ ಬರಹಗಳನ್ನು ಪರಾಮರ್ಶಿಸಲಾಗುವುದು.
- ನಿಯಮದ ಪ್ರಕಾರ ಮಹಾಪ್ರಬಂಧದ ಅಚ್ಚುಕಟ್ಟುತನಕ್ಕೆ ಯಾವುದೇ ಚ್ಯುತಿ ಬರದಂತೆ ಎಚ್ಚರ ವಹಿಸಲಾಗುವುದು.

**೪. ಆಕರಗಳ ಸಾಹಿತ್ಯ ಪರಾಮರ್ಶೆ:**

ಪ್ರಸ್ತುತ ಸಂಶೋಧನಾ ಅಧ್ಯಯನವು ಜನಪದ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆಗಟ್ಟುಗಳನ್ನು ಗರತಿಯ ಹಾಡು ಎಂಬ ಸಾಂಗ್ರಹಿಕ ಸಾಹಿತ್ಯದೊಂದಿಗೆ ಅಲ್ಲದೇ ಇನ್ನೂ ಹಲವಾರು ಜನಪದ ಕಾವ್ಯಗಳು, ಕನ್ನಡ ಜನಪದ ಕಥೆಗಳು, ಸಾಮಾಜಿಕ ಕಥನ ಗೀತೆಗಳು, ಇನ್ನೂ ಮುಂತಾದ ಆಕರಗಳನ್ನು ಸಂಗ್ರಹಿಸಿ ಕ್ರೂಢೀಕರಿಸಬೇಕಾಗಿದೆ.

ಆದ್ದರಿಂದ ಈ ಎಲ್ಲಾ ರೀತಿಯ ಜನಪದ ಸಾಹಿತ್ಯದ ಮೂಲ ಬರಹಗಳನ್ನು ಇಟ್ಟುಕೊಂಡು, ಇನ್ನೂ ಹೆಚ್ಚಿನ ಅಧ್ಯಯನಕ್ಕಾಗಿ ಸಾಹಿತ್ಯವನ್ನು ಸಂಶೋಧಿಸಿ ಸಂಗ್ರಹಿಸಿ ಅಧ್ಯಯನಕ್ಕೆ ಪ್ರಾಥಮಿಕ ಆಕರಗಳೆಂದು ಆಯ್ದುಕೊಳ್ಳಲಾಗಿದೆ. ಜೊತೆಗೆ ಜನಪದ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆಗಳ ಬಗ್ಗೆ ಬರೆದಿರುವ ಇತರ ಬರಹಗಾರರ ಕೃತಿಗಳನ್ನು ಲೇಖನಗಳನ್ನು ಮಹಾಪ್ರಬಂಧಗಳನ್ನು ಸಹಾ ಇಲ್ಲಿ ಪರಾಮರ್ಶಿಸಲಾಗುತ್ತದೆ. ಅಂತಹ ಲೇಖನಗಳು, ಕೃತಿಗಳು, ಮಹಾಪ್ರಬಂಧಗಳು ಅನುಷಂಗಿತವಾಗಿ ಅಧ್ಯಯನಕ್ಕೆ ಸೇರ್ಪಡೆಗೊಂಡಿವೆ. ಈಗಾಗಲೇ ಅನೇಕ ಸಂಶೋಧಕರು ಸಂವಾದಿಸಿ ಪ್ರಕಟಿಸಿದ ವಿಮರ್ಶಾ ಲೇಖನಗಳನ್ನು ಕೃತಿಗಳನ್ನು ಅವಲೋಕಿಸಲಾಗುವುದು. ಇವುಗಳೂ ಸಹ ಅಧ್ಯಯನ ಗುರಿಯನ್ನು ತಲುಪಲು ಸಹಾಯಕವಾಗಿವೆ.

**೫. ಅಧ್ಯಯನದ ಪ್ರಾಕ್‌ಕಲ್ಪನೆಗಳು:**

ಪ್ರಶ್ನೆಗಳಲ್ಲದೆ ಸಂಶೋಧನೆ ಇಲ್ಲ. ಶೋಧನೆ ಹುಟ್ಟುವುದು ಊಹೆಗಳಿಂದ. ವಿಷಯದ ಆಯ್ಕೆಯಲ್ಲಿ ಕಂಡುಕೊಂಡ ಸ್ಥೂಲವಾದ ಪ್ರಶ್ನೆಗೆ ಒಂದು ಸ್ಥೂಲವಾದ ಉತ್ತರ ಕಂಡುಕೊಳ್ಳುವುದು ಪ್ರಾಕ್‌ಕಲ್ಪನೆ. ಇವು ಅಧ್ಯಯನಕ್ಕೆ ಒಳಪಟ್ಟು ಹೊಸದರ ಹೊಳಪನ್ನು ಶೋಧಿಸುತ್ತವೆ. ಊಹೆ ಇರುವ ಯಾವುದೇ ವಿಚಾರ ಒಬ್ಬ ವ್ಯಕ್ತಿಯ ಮನಸ್ಸಿಗೆ ಬಂದರೆ ಅಭ್ಯಾಸ ಫಲಪ್ರದಾಯವಾಗುತ್ತದೆ ಎಂದಿದ್ದಾರೆ. ಸಮಸ್ಯೆಯ ಬಗ್ಗೆ ಪ್ರಾಕ್‌ಕಲ್ಪನೆ ಎಂಬ ವಿಚಾರ ಸಂಶೋಧಕನಿಗೆ ತಲೆ ಹೊಕ್ಕಾಗ ಬರುವ ಉತ್ತರ ಪ್ರಾಥಮಿಕ ಸತ್ಯ. ಈ ಸತ್ಯವನ್ನು ಪ್ರಮಾಣೀಕರಿಸಲು ಆಕರ, ಆಧಾರಗಳು, ಸಾಕ್ಷಿಗಳಾಗಿ ನಿಲ್ಲುತ್ತವೆ. ಆಗ ಸತ್ಯಕ್ಕೆ ಸಂಶೋಧನೆ ಎಂಬುದು ಪ್ರಾಪ್ತಿಯಾಗುತ್ತದೆ.

ಪ್ರಸ್ತುತ ಪ್ರಬಂಧವು ಕನ್ನಡ ಸಾಹಿತ್ಯದಲ್ಲಿನ ಭಾಗವಾದ ಜನಪದ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು ಎಂಬುದರಲ್ಲಿ ಸಿಂಹಾವಲೋಕನ ಕ್ರಮದಲ್ಲಿ ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಕಥಾಹಂದರದಲ್ಲಿ ಮಹಿಳೆಯ ಸ್ಥಾನಮಾನದ ನೆಲೆಗಟ್ಟಿನ ಮೂಲಕ ಸಾಗುವುದಾಗಿದೆ. ಈ ಮೂಲಕ ಇದಕ್ಕೆ ಯಾವುದೇ ಪ್ರಾಯೋಗಿಕತೆ ಸಂಖ್ಯಾಶಾಸ್ತ್ರೀಯ, ಅಂಕಿ ಅಂಶಗಳು ಮಾಹಿತಿ ಇದ್ದರೆ ಅವುಗಳ ಮೂಲಕ ಮಾಹಿತಿ ನೀಡುವುದಾಗಿದೆ. ಸ್ತ್ರೀಯು ತಾಯಿಯಾಗಿ, ಮಡದಿಯಾಗಿ,

ಮಗಳಾಗಿ ವಿವಿಧ ಸ್ಥಾನಗಳಲ್ಲಿ ಯಾವ ರೀತಿ ಬಿಂಬಿತವಾಗಿದ್ದಾಳೆ ಎಂಬುದನ್ನು ಹಲವಾರು ಚಲಕಗಳನ್ನು ಪ್ರಾಕ್‌ಕಲ್ಪನೆಗಳಾಗಿ ಕುತೂಹಲವನ್ನಾಗಿ ಈ ಮಹಾಪ್ರಬಂಧ ಹೊಂದಿದ್ದು ಅವುಗಳನ್ನು ವಿಶ್ಲೇಷಿಸುವ ಪ್ರಯತ್ನವಾಗಿದೆ.

**೬. ಸಂಶೋಧನಾ ವಿಧಾನ:**

ಪ್ರಸ್ತುತ ಮಹಾಪ್ರಬಂಧಕ್ಕೆ ಸಂಬಂಧಿಸಿದಂತೆ ಇಲ್ಲಿ ಕೆಲವು ಸಂಶೋಧನಾ ವಿಧಾನಗಳನ್ನು ಅಧ್ಯಯಿಸಿಕೊಳ್ಳಲಾಗಿದೆ. ಮುಖ್ಯವಾಗಿ ವಿಶ್ಲೇಷಣಾತ್ಮಕ ವಿಧಾನದಿಂದ ವ್ಯಾಖ್ಯಾತ್ಮಕ ಸಂಶೋಧನ ವಿಧಾನದತ್ತ ಮುಂದುವರೆಯುತ್ತದೆ. ಇದಕ್ಕೆ ಪೂರಕವಾಗಿ, ಐತಿಹಾಸಿಕ, ಸಾಮಾಜಿಕ, ತೌಲನಿಕ, ಸಾಂಸ್ಕೃತಿಕ, ಬಹುಶಾಸ್ತ್ರೀಯ ಸಾಮಾಗ್ರಿಮುಖಿ, ವಿವರಣಮುಖಿ, ಮನೋ ವೈಜ್ಞಾನಿಕ ಸಂಶೋಧನ ವಿಧಾನಗಳನ್ನು ಬಳಸಿಕೊಳ್ಳಲಾಗುವುದು. ಮಹಾಪ್ರಬಂಧವು ಸಮರೋಪ ಅಧ್ಯಯನದ ಫಲಿತಗಳು, ಅನುಬಂಧಗಳು, ಗ್ರಂಥಸೂಚಿ, ಪದಕೋಶ, ಪರಾಮರ್ಶನ ಗ್ರಂಥಗಳು, ಪರಾಮರ್ಶನ ಲೇಖನಗಳನ್ನು ಒಳಗೊಂಡಿರುತ್ತದೆ. ಅಡಿ ಟಿಪ್ಪಣಿಗಳನ್ನು ಮತ್ತು ವಿಸೃತ ವಾಕ್ಯಗಳನ್ನು ಪ್ರತಿ ಪುಟದ ಕೆಳಗಡೆಯಲ್ಲಿ ದಾಖಲಿಸುವುದು ಪೂರಕವಾದ ವಿದೃತ ವಿಷಯವನ್ನು ಅನುಬಂಧಗಳಲ್ಲಿ ಪ್ರಬಂಧದ ಕೊನೆಯಲ್ಲಿ ವಿಸ್ತೃತವಾಗಿ ವಿವರಣೆ ನೀಡಲಾಗುತ್ತದೆ.

ಪ್ರಸ್ತುತ "ಜನಪದ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆಗಳೇನು' ಎಂಬ ಮಹಾ ಪ್ರಬಂಧದಲ್ಲಿ ಈ ಕೆಳಗಿನಂತೆ ಪರಿವಿಡಿಯನ್ನು ಸಿದ್ಧಪಡಿಸಿಕೊಂಡು ಅಧ್ಯಯನಕ್ಕೆ ಯೋಜನೆಯನ್ನು ತಯಾರಿಸಲಾಗಿದೆ.

**ಅಧ್ಯಾಯ–೧** ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ.

**ಅಧ್ಯಾಯ–೨** ಜನಪದ ಸಾಹ್ಯಿತ್ಯದ ಸ್ಥೂಲ ಪರಿಚಯ, ಅರ್ಥ, ವ್ಯಾಖ್ಯಾನ, ಸ್ವರೂಪ, ವಿಕಾಸ ಮತ್ತು ಮಹತ್ವ.

**ಅಧ್ಯಾಯ–೩** ಜನಪದ ಸಾಹಿತ್ಯದಲ್ಲಿ ಸ್ತ್ರೀ ಸಂವೇದನಾ ನೆಲೆಗಳು.

೩.೧ ಆರ್ಥಿಕವಾಗಿ ಮಹಿಳೆಯ ಪಾತ್ರ.

೩.೨ ಸಾಮಾಜಿಕವಾಗಿ ಮಹಿಳೆಯ ಪಾತ್ರ,

೩.೩ ಭೌದ್ಧಿಕವಾಗಿ ಮಹಿಳೆಯ ಪಾತ್ರ.

೩.೪ ಸಾಂಸ್ಕೃತಿಕವಾಗಿ ಮಹಿಳೆಯ ಪಾತ್ರ,

೪. ಸಂಶೋಧನತ್ಮಕವಾಗಿ ಮಹಿಳೆಯ ಸ್ಥಾನಮಾನ.

**ಅಧ್ಯಾಯ–೫** ಜನಪದ ಸಾಹಿತ್ಯದ ಪ್ರಕಾರಗಳು.

**ಅಧ್ಯಾಯ–೬** 'ಜನಪದ ಸಾಹಿತ್ಯದಲ್ಲಿ ಸ್ತ್ರೀ ಸಂವೇದನಾ ನೆಲೆಗಳು' ಬರಹಗಳ ಸಂಪಾದನ ಕೃತಿಗಳ ಸಮೀಕ್ಷೆ.

**ಅಧ್ಯಾಯ–೭** ಜನಪದ ಸಾಹಿತ್ಯದ ವಸ್ತು, ಭಾಷೆ ಶೈಲಿ, ತಂತ್ರ.

**ಅಧ್ಯಾಯ–೮** ಸಮಾರೋಪ ಅಧ್ಯಯನದ ಮುಂದಿನ ಫಲಿತಗಳು ಮತ್ತು ಸಾಧ್ಯತೆ.

**ಅನುಬಂಧ :**

ಅಧ್ಯಯನದ ಕೊನೆಯಲ್ಲಿ ಮಹಾಪ್ರಬಂಧಕ್ಕೆ ಪೂರಕವಾದ ಆಕರ ಸಾಮಗ್ರಿಗಳ ಬಗ್ಗೆ ಇತರ ವಿಷಯಗಳ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗುತ್ತದೆ.

೧. ಪ್ರಾಥಮಿಕ ಆಕರಗಳು.

೨. ಪರಾಮರ್ಶನ ಗ್ರಂಥಗಳು.

೩. ಪರಾಮರ್ಶನ ಲೇಖನಗಳು.

೪. ಸಾಂದರ್ಭಿಕ ಛಾಯಾ ಚಿತ್ರಗಳು.

೫. ಸಂದರ್ಶನದ, ಅವಲೋಕನ, ಪ್ರಶ್ನಾವಳಿ ಪಟ್ಟಿ.

**೭. ಸಂಶೋಧನೆಯ ಕಾಲವಧಿ :**

ಈ ಪ್ರಸ್ತುತ ಸಂಶೋಧನ ಸಮಸ್ಯೆಯ ಅಧ್ಯಯನಕ್ಕೆ ಮೂರು ವರ್ಷಗಳ ಕಾಲಾವಧಿಯನ್ನು ನಿಗಧಿಪಡಿಸಿಕೊಳ್ಳಬೇಕೆಂದುಕೊಂಡಿದ್ದೇನೆ. ಮೊದಲ ವರ್ಷದಲ್ಲಿ ಸಂಶೋಧನಾ ವಿಷಯಕ್ಕೆ ಈ ಸಂಬಂಧಿಸಿದ ಸಂವಾದನ ಕೃತಿಗಳನ್ನು ಸಂಗ್ರಹಿಸುವುದು.

ಎರಡನೇ ವರ್ಷದಲ್ಲಿ ದೊರೆತ ವಸ್ತು ಸಾಮಾಗ್ರಿಯ ಬಲದಿಂದ ವಿಷಯವನ್ನ ಅಧ್ಯಯನಗಳಾಗಿ ವಿಂಗಡಿಸಿಕೊಂಡು ಆಯಾ ಅಧ್ಯಾಯದಲ್ಲಿನ ಪ್ರಮುಖ ಅಂಶಗಳ ಪಟ್ಟಿ ಮಾಡಿ ಸಿದ್ಧಪಡಿಸಿಕೊಂಡು ಅವುಗಳನ್ನು ವಿಶ್ಲೇಷನಾತ್ಮಕವಾಗಿ ವ್ಯಾಖ್ಯಾನಿಸುವುದು.

ಮೂರನೇ ವರ್ಷದಲ್ಲಿ ವಿಶ್ಲೇಷಿಸಿದ ಎಲ್ಲಾ ಅಧ್ಯಾಯಗಳನ್ನು ಮತ್ತೊಂದು ಬಾರಿ ಪರಿಶೀಲಸಿ ತಿದ್ದುಪಡಿ ಮಾಡಿ, ಅಗತ್ಯವೆನಿಸಿದ್ದನ್ನು ಸೇರಿಸುವ ಪ್ರಕ್ರಿಯೆ ನಡೆದು ಇದೇ ವರ್ಷದ ಕೊನೆಯ ಅವಧಿಯಲ್ಲಿ ಮಹಾಪ್ರಬಂಧವನ್ನು ಅಚ್ಚುಕಟ್ಟಾಗಿ ಡಿ.ಟಿ.ಪಿ ಮಾಡಿಸುವುದು. ಅದರ ಒಂದು ಕರಡು ಪ್ರತಿಯನ್ನು ತಿದ್ದುಪಡಿ ಮಾಡುವುದು.

ಹೀಗೆ ಒಟ್ಟು ಮೂರು ವರ್ಷಗಳಲ್ಲಿ ಅಧ್ಯಯನದ ಅನುಕೂಲಕ್ಕಾಗಿ ೬ ತಿಂಗಳಿಗೆ ಒಂದರಂತೆ ೬ ಅಧ್ಯಯನಗಳನ್ನಾಗಿ ವಿಂಗಡಿಸಿಕೊಂಡು ಮಾರ್ಗದರ್ಶಕರ ಸಲಹೆ ಸೂಚನೆಗಳ ಮೂಲಕ ಮಹಾಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಸಾದರಪಡಿಸುವುದು.

**ಆಕರ ಗ್ರಂಥಗಳು:**


- ಕನ್ನಡ ಸಂಶೋಧನಾ ಶಾಸ್ತ್ರ
  ಡಾ.ಎಂ.ಎಂ.ಕಲಬುರ್ಗಿ.
- ಸಂಶೋಧನಾ ಸ್ವರೂಪ
  ಡಾ.ಬಿ.ವಿ.ಶಿರೂರ್.